VIDYAVARDHAKA SANGHA®

# VIDYAVARDHAKA LAW COLLEGE

SHESHADRI IYER ROAD, MYSURU-1

IN

ASSOCIATION WITH

**A CRUSADE FOR SELF-RESPECT OF VOTERS, KARNATAKA**

*Organizing*

## Awareness Programme

On

# The Onus of Safe-guarding Democracy is on the Voter

**Presided by:** **Sri Gundappagowda**
Hon'ble President
VV Sangha®

**Speaker:** **Dr.K. Jayaramaiah**
Rtd Professor

**Guest of Honour:** **Er.P. Vishwanath**
Hon'ble Secretary
VV Sangha ®

**Sri N.G Ramachandra**
Convener & Crusade for self-respect of voters, Karnataka

**Dr. Deepu.P**
Principal
VVLC, Mysuru

**Dr. Marigowda.S**
Principal
VVFGC, Mysuru

**Date**: 8/2/2022
**Time**: 9:30 AM

**Venue**: College Ground

## ALL ARE WELCOME

**REPORT ON AWARENESS PROGRAMME ON THE ONUS OF SAFE GUARDRING DEMOCRACY IS ON THE VOTER**

**(2021-22)**

On **8th February 2022** an awareness programme on the Onus of safe guarding the democracy is on the voter was organized at college ground. Dr. Raghu B.T, Asst. Professor, VVFGC welcomed the guest. Addressing the gathering distinguished speaker Dr. K Jayaramaiah said that in democracy it is not simply enough to inform voters about election dates. In order to help the electorates take an informed decision, it is quintessential to sensitize them about the importance of participating in the electoral process. Moreover, voters need to be educated about the process and made aware of the political parties, their manifestos, backgrounds of the contesting candidates and several other information which is necessary to help them cast an ‘enlightened’ vote.

Further he said Vote is our right; it is a not goods which is for sale. We have to fight against corruption by casting our vote promptly without expecting any consideration. This is not possible by few but we have to unite to fight against this evil practice. Today it is required to bring a social revolution to fight against corruption and save our self-respect. In a democratic country people are supreme. Let us utilize this supremacy by ruling our self and not through corrupt people.

Hon’ble Secretary Er. P. Vishwanath distributed pamphlets to students which contained information on voting right. It highlighted the call for creating corruption-free “Sarvodaya Government” which is the task of today’s youth.

Further Sri Gundappagowda, Hon’ble President, VV Sasngha® in his presidential speech said that today voters should strive to remove the evil practice of purchasing vote. The present youths play a vital role in bringing about change in our voting system. They should choose their representatives wisely and bring change in this society. Sri N.G Ramachandra, Convener of Crusade for self-respect of voters, Karnataka, Dr. Deepu.P, Principal, VVLC, Dr. Marigowda. S, Principal, VVFGC were present in this occasion.

The programme concluded with vote of thanks proposed by Dr. Raghu B.T.

**ಮತದಾರರಲ್ಲಿ ಜಾಗೃತಿ** | **ಮೈಸೂರು ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಸಮಾರಂಭ**

# ಮತದಾರರ ಸ್ವಾಭಿಮಾನ ಆಂದೋಲನ



• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ವಿದ್ಯಾವರ್ಧಕ ಶಿಕ್ಷಣ ಸಂಸ್ಥೆ ಆವರಣದಲ್ಲಿ ಮತದಾರರ ಸ್ವಾಭಿಮಾನ ಆಂದೋಲನ ವತಿಯಿಂದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು ಮತ್ತು ವಿದ್ಯಾವರ್ಧಕ ಕಾನೂನು ಕಾಲೇಜುಗಳ ಸಹಯೋಗದೊಂದಿಗೆ ಜನತಂತ್ರ ರಕ್ಷಣೆ- ಮತದಾರರ ಹೊಣೆ ಕುರಿತು ಮತದಾರ ಜಾಗೃತಿ ಕಾರ್ಯಕ್ರಮವನ್ನು ಮಂಗಳವಾರ ಆಯೋಜಿಸಲಾಗಿತ್ತು.

ಈ ವೇಳೆ ಜಾಗೃತಿ ಆಂದೋಲನದ ಸಂಚಾಲಕ ಡಾ. ಕೆ. ಜಯರಾಮಯ್ಯ ಮಾತನಾಡಿ, ವೋಟು ಮಾರಾಟದ ಸರಕಲ್ಲ; ಜನತಂತ್ರದ ನಮ್ಮ ಹಕ್ಕು. ವೋಟನ್ನು ಮಾರಿಕೊಳ್ಳುವುದು ಬೇಡ, ಭ್ರಷ್ಟಾಚಾರ ಮುಕ್ತ ಸರ್ವೋದಯ ಸಮಾಜ ರೂಪಿಸಲು ಸ್ವಾತಂತ್ರ್ಯದ ನಮ್ಮ ಹಕ್ಕನ್ನು ಪ್ರಾಮಾಣಿಕವಾಗಿ ಚಲಾಯಿಸೋಣ. ಈ ಮಹತ್ಕಾರ್ಯವನ್ನು ಕೆಲವರೇ ಕೂಡಿ ಸಾಧಿಸಲು ಸಾಧ್ಯವಿಲ್ಲ, ಎಲ್ಲರೂ ಒಗ್ಗೂಡಿ ಬೃಹತ್ ಜನಾಂದೋಲನವಾಗಿ ರೂಪಿಸೋಣ. ನಮ್ಮ ಸ್ವಾಭಿಮಾನದ ಬದುಕನ್ನು ಕಾಪಾಡಿಕೊಳ್ಳೋಣ. ನಮ್ಮನ್ನು ನಾವೇ ಆಳಿಕೊಳ್ಳೋಣ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಯ ಗೌರವ ಅಧ್ಯಕ್ಷ ಗುಂಡಪ್ಪಗೌಡ ಮಾತನಾಡಿ, ಮತದಾರರು ಬುದ್ಧಿವಂತಿಕೆಯಿಂದ ಸದ್ಯ ಸಮಾಜವನ್ನು ಕಿತ್ತು ತಿನ್ನುವ ಕಾಯಿಲೆಯಾದ ದುಡ್ಡು ಕೊಟ್ಟು ಮತವನ್ನು ಕೊಂಡುಕೊಳ್ಳುವ ಪದ್ಧತಿಯನ್ನು ಬುಡದಿಂದ ಕಿತ್ತುಹಾಕಬೇಕು. ಪ್ರತಿಯೊಬ್ಬ ನಾಗರೀಕನು ಪ್ರಜ್ಞಾವಂತನಾಗಿ ಯೋಚಿಸಿ, ಒಳ್ಳೆಯ ವ್ಯಕ್ತಿಯನ್ನು ಆಯ್ಕೆ ಮಾಡಿ, ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಇನ್ನಾದರೂ ಸರಿಯಾದ ದಾರಿಯಲ್ಲಿ ಕೊಂಡೊಯ್ಯುವ ನಿಟ್ಟಿನಲ್ಲಿ ಯುವಶಕ್ತಿ ಒಂದಾಗಬೇಕು ಎಂದು ತಿಳಿಸಿದರು.

ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಪಿ. ವಿಶ್ವನಾಥ್ ಅವರು, ವಿದ್ಯಾರ್ಥಿಗಳಲ್ಲಿ ಮತದಾನದ ಜಾಗೃತಿ ಮೂಡಿಸುವ ಸಲುವಾಗಿ ಭಿತ್ತಿಪತ್ರಗಳನ್ನು ಹಂಚುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ರೈತಸಂಘದ ಎನ್.ಜಿ. ರಾಮಚಂದ್ರ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ.ಎಸ್. ಮರೀಗೌಡ, ಕಾನೂನು ಕಾಲೇಜಿನ ಪ್ರಾಂಶುಪಾಲೆ ಡಾ. ದೀಪು ಇದ್ದರು. ಡಾ.ಬಿ.ಟಿ. ರಘು ನಿರೂಪಿಸಿದರು.

ಕನ್ನಡಪ್ರಭ Wed, 09 February 2022
https://kpepaper.asianetnews.com/c/66132488

ಆಂದೋಲನ

# ವಿದ್ಯಾವರ್ಧಕದಲ್ಲಿ ಮತದಾನದ ಅರಿವು ಕಾರ್ಯಕ್ರಮ

## 'ಮತದಾರರ ಸ್ವಾಭಿಮಾನ ಆಂದೋಲನ ಕರ್ನಾಟಕ' ವತಿಯಿಂದ ಕರಪತ್ರ ವಿತರಣೆ



ಮೈಸೂರು: ಮತದಾರರ ಸ್ವಾಭಿಮಾನ ಆಂದೋಲನ ಕರ್ನಾಟಕದ ವತಿಯಿಂದ ನಗರದ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ವಿದ್ಯಾವರ್ಧಕ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಮತದಾನದ ಮಹತ್ವ ತಿಳಿಸುವ ಕರಪತ್ರ ವಿತರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕರಪತ್ರ ಬಿಡುಗಡೆಗೊಳಿಸಿದ ವಿದ್ಯಾವರ್ಧಕ ಸಂಘದ ಗೌರವಾಧ್ಯಕ್ಷ ಗುಂಡಪ್ಪಗೌಡ ಮಾತನಾಡಿ, ಜನತಂತ್ರದಲ್ಲಿ ವಿದ್ಯಾರ್ಥಿಗಳ ಕರ್ತವ್ಯ ಮತ್ತು ಜವಾಬ್ದಾರಿ ಹೆಚ್ಚಿರುತ್ತದೆ. ಇತ್ತೀಚಿನ ವರ್ಷಗಳಲ್ಲಿ ದೇಶದ ಚುನಾವಣಾ ವ್ಯವಸ್ಥೆ ಭ್ರಷ್ಟಗೊಂಡು ಅವನತಿ ಹಾದಿಯತ್ತ ಸಾಗಿದೆ. ಇದನ್ನು ಸರಿದಾರಿಗೆ ತರುವಲ್ಲಿ ವಿದ್ಯಾರ್ಥಿಗಳ ಪಾತ್ರ ಬಹು ಮುಖ್ಯ ಎಂದರು.

ಮತದಾರರ ಸ್ವಾಭಿಮಾನ ಆಂದೋಲನ ಕರ್ನಾಟಕದ ಸಂಚಾಲಕ ಪ್ರೊ.ಕೆ.ಎಂ.ಜಯರಾಮಯ್ಯ ಮಾತನಾಡಿ, ವೋಟು ಮಾರಿಕೊಳ್ಳುವುದೆಂದರೆ ಮತದಾರರು ತಮ್ಮ ಸ್ವಾಭಿಮಾನವನ್ನೇ ಮಾರಿಕೊಂಡಂತೆ ಎಂಬುದನ್ನು ಎಂದೆಂದಿಗೂ ಮರೆಯಬಾರದು. ಈ ನಿಟ್ಟಿನಲ್ಲಿ ಮತದಾರರನ್ನು ಜಾಗೃತಿಗೊಳಿಸುವ ಜವಾಬ್ದಾರಿಯನ್ನು ವಿದ್ಯಾರ್ಥಿಗಳು ನಿರ್ವಹಿಸಬೇಕೆಂದು ಕರೆನೀಡಿದರು.

ಆಂದೋಲನದ ಮತ್ತೊಬ್ಬ ಸಂಚಾಲಕ ಎನ್.ಜಿ.ರಾಮಚಂದ್ರ, ಸಂಸ್ಥೆಯ ಕಾರ್ಯದರ್ಶಿ ಪಿ.ವಿಶ್ವನಾಥ್, ಪ್ರಾಂಶುಪಾಲರಾದ ಪ್ರೊ.ಮರಿಗೌಡ, ಪ್ರೊ.ದೀಪು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಪ್ರಾಧ್ಯಾಪಕ ಬಿ.ಪಿ.ರಘು ಕಾರ್ಯಕ್ರಮವನ್ನು ನಿರೂಪಿಸಿದರು.